

# ಹೊಳಪು ಕಂಗಳ ಹಾರುಜೇಡ

**ಹೊಳೆಯುವ ಕಣ್ಣುಗಳೇ ಈ ಹಾರುಜೇಡದ ಪ್ರಮುಖ ಆಕರ್ಷಣೆ. ಕೀಟದ ಬೇಟೆಯಾಡಿ, ಮಿಕದ ರಸ ಹೀರುವ ಈ ಜೇಡ, ಪರಿಸರದಲ್ಲಿ ‘ಕೀಟನಿಯಂತ್ರಕ’ ಎಂದೇ ಹೆಸರು ಮಾಡಿದೆ.**

■ **ಶಶಿಧರಸ್ವಾಮಿ ಆರ್. ಹಿರೇಮಠ**

ಮ್ಯಾಕ್ರೊ ಫೋಟೊಗ್ರಫಿಗೆಂದು ಕೀಟಗಳ ಅನ್ವೇಷಣೆಯಲ್ಲಿರುವಾಗ ಕೀಟಗಳ ಜೊತೆಜೊತೆಗೆ ಜೇಡಗಳೂ ಕಣ್ಣಿಗೆ ಬೀಳುವುದುಂಟು. ಹೀಗೆ ಒಮ್ಮೆ ಕ್ಯಾಮೆರಾ ಹಿಡಿದು ಹೊರಟಿದ್ದಾಗ ಹೊಲದ ಅಂಚಿನಲ್ಲಿರುವ ಮಾವಿನ ಮರದ ಎಲೆ ಮೇಲೆ ಸಣ್ಣ ಜೀವಿಯೊಂದು ನಡೆದಾಡುವುದು ಗೋಚರಿಸಿತು. ತಕ್ಷಣವೇ ಕ್ಯಾಮೆರಾ ಗುರಿ ಅದರತ್ತ ತಿರುಗಿಸಿದೆ.

ಅದು ಹೆಣ್ಣು ಹಾರುಜೇಡವಾಗಿತ್ತು. ಆ ಜೇಡ ತನ್ನ ಹೊಳಪು ಕಂಗಳಿಂದ ಕ್ಯಾಮೆರಾ ಲೆನ್ಸನ್ನು ದಿಟ್ಟಿಸಿ ನೋಡುತ್ತಿತ್ತು.

ಈ ಜೇಡವನ್ನು ‘ಬ್ರೆಟ್ಟಸ್ ನೆಗೆಯುವ ಜೇಡ’ ಅಥವಾ ‘ಬ್ರೆಟ್ಟಸ್ ಹಾರುಜೇಡ’ ಎಂದು ಕರೆಯುತ್ತಾರೆ. ಇಂಗ್ಲಿಷಿನಲ್ಲಿ ಇದಕ್ಕೆ ಬ್ರೆಟ್ಟಸ್ ಜಂಪಿಂಗ್ ಸ್ಪೈಡರ್ ಎನ್ನುತ್ತಾರೆ. ವೈಜ್ಞಾನಿಕವಾಗಿ ಇದು ಬ್ರೆಟ್ಟಸ್ ಕುಲಕ್ಕೆ ಸೇರಿದೆ.

ಬ್ರೆಟ್ಟಸ್ ನೆಗೆಯುವ ಜೇಡಗಳು ನೋಡಲು ಸುಂದರ ಹಾಗೂ ಆಕರ್ಷಣೀಯ. ಹೆಣ್ಣು ಜೇಡ 6–7 ಮಿ.ಮೀ. ಇದ್ದು, ಗಂಡು ಜೇಡ ಹೆಣ್ಣಿಗಿಂತ ಚಿಕ್ಕದಾಗಿರುತ್ತದೆ. ಅಂದರೆ, 4–5 ಮಿ.ಮೀ. ಗಾತ್ರದಲ್ಲಿರುತ್ತದೆ. ಉದ್ದನೆಯ ಶಿರೋವಕ್ಷದ ಮಧ್ಯದಲ್ಲಿ ಕೆಂಪಾಗಿದೆ. ಹಿಂಭಾಗ ದುಂಡಾಗಿದೆ. ಪಾರ್ಶ್ವ ಬದಿಗಳಲ್ಲಿ ದಪ್ಪನಾಗಿ ವಕ್ರವಾಗಿರುವ ಬಿಳಿ ಪಟ್ಟಿಗಳಿವೆ. ಇವೇ ಈ ಜೇಡವನ್ನು ಆಕರ್ಷಕವಾಗಿ ಕಾಣುವಂತೆ ಮಾಡಿವೆ.

ಗೋಳಾಕಾರದ ಕಿಬ್ಬೊಟ್ಟೆಯಲ್ಲಿ ಕೆಂಪು ಬಣ್ಣದ ದಪ್ಪ ಅಂಡಾಕಾರದ ಗುರುತಿದೆ. ಅಂಡಾಕಾರದ ಗುರುತಿನಲ್ಲಿ ಎರಡು ಹಳದಿ ಬಣ್ಣದ ಬಿರುಗೂದಲುಗಳು ವೃತ್ತಾಕಾರದಿಂದ ಕೂಡಿವೆ. ಹೆಣ್ಣುಗಳಲ್ಲಿ ಶಿರೋವಕ್ಷವು ಕಂದು ಕಿತ್ತಳೆ ಬಣ್ಣದ್ದಿರುತ್ತದೆ. ನಾಲ್ಕು ಸಾಲುಗಳಲ್ಲಿ ಜೋಡಿಸಿಟ್ಟಂತೆ ಎಂಟು ಕಣ್ಣುಗಳಿದ್ದು, ಮುಂಭಾಗದ ಎರಡು ಕಣ್ಣುಗಳು ದೊಡ್ಡದಾಗಿರುತ್ತವೆ. ಹಿಂಭಾಗದ ಹಾಗೂ ಮಧ್ಯದ ಕಣ್ಣುಗಳು ತುಂಬಾ ಸಣ್ಣ. ಚಾಕ್ಷುಷ (ನೇತ್ರದ–ಒಕ್ಯುಲರ್) ಪ್ರದೇಶವು ಚಿಕ್ಕ ರೋಮಗಳಿಂದ ಆವೃತವಾಗಿರುತ್ತದೆ. ಉದ್ದವಾದ ಎಂಟು ಕಾಲುಗಳಿದ್ದು ಮುಂದಿನ ಜೋಡಿ ಕಾಲುಗಳ ಮಂಡಿಚಿಪ್ಪು ಮತ್ತು ಸಂದುಗಳು ಕೂದಲುಗಳ ಅಂಚುಗಳಿಂದ ಮುಚ್ಚಲ್ಪಟ್ಟು ತೀಕ್ಷ್ಣ ಮುಳ್ಳುಗಳಿಂದ ಆವೃತವಾಗಿವೆ. ಬೇಟೆಯಾಡಲು ಈ ಕಾಲುಗಳೇ ನೆರವಿಗೆ ಬರುವುದು. ನಾಲ್ಕನೇ ಜೋಡಿ ಕಾಲುಗಳು ಮೇಲ್ಮುಖವಾಗಿರುತ್ತವೆ.

ಈ ಜೇಡಗಳು ಮೋಹಕವಾಗಿ ನೃತ್ಯ ಪ್ರದರ್ಶನ ಮಾಡುತ್ತವೆ. ಹೆಣ್ಣು ಜೇಡಗಳು ಮೊಟ್ಟೆಗಳನ್ನು ಬಲೆಜಾಲವನ್ನು ನೇಯ್ದಿರುವ ಜಾಳಿಗೆಯಂತಿರುವ ಹಾಳೆಯ ಕೆಳಗೆ ಮುಚ್ಚಿಟ್ಟು ರಕ್ಷಿಸುತ್ತವೆ. ಇವು ತೋಟ, ಉದ್ಯಾನವನ, ಕುರುಚಲು ಕಾಡು, ತೋಪುಗಳ ಸಣ್ಣ ಮರಗಳಲ್ಲಿ ಹಾಗೂ ಎಲೆಗಳ ಮೇಲ್ಮೈಯಲ್ಲಿ ಕಾಣಸಿಗುತ್ತವೆ. ಈ ಜೇಡ ಇತರ ಜೇಡಗಳನ್ನು ಬೇಟೆಯಾಡುತ್ತದೆ. ಬಲೆ ನೇಯುವ ನೇಕಾರ ಜೇಡಗಳನ್ನು ತಿನ್ನಲು ಇಷ್ಟಪಡುತ್ತವೆ. ಅಲ್ಲದೇ ಬಲೆಗಾರ ಜೇಡಗಳನ್ನು ಸೆರೆಹಿಡಿಯಲು, ವಿಶಿಷ್ಟ ಕಾರ್ಯತಂತ್ರವನ್ನು ರೂಪಿಸಿ ಬಲೆಯ ಅಂಚಿನಲ್ಲಿ ನಿಂತು ಕಾಯುತ್ತದೆ. ಹಲವಾರು ಮಾದರಿಯಿಂದ ಬೇಟೆಗೆ ಪ್ರಯತ್ನಿಸುತ್ತವೆ. ನಂತರ ಬೇಟೆಯ ಜೇಡವು ಪ್ರಲೋಭನೆಗೆ ಒಳಗಾದಾಗ ಅದರ ಮೇಲೆ ಆಕ್ರಮಣ ಮಾಡಿ ಇರಿದು ಸೆರೆಹಿಡಿಯುತ್ತವೆ.

ಬ್ರೆಟ್ಟಸ್ ನೆಗೆಯುವ ಜೇಡವು ನೇಯ್ದ ರೇಷ್ಮೆ ಬಲೆಗೆ ಅಂಟಿಕೊಳ್ಳುವುದಿಲ್ಲ ಮತ್ತು ಸುಲಭವಾಗಿ ಬಲೆಗಳಲ್ಲಿ ನಡೆಯಬಲ್ಲದು. ಕೀಟಗಳನ್ನು ಸುಲಭವಾಗಿ ಹಿಂಬಾಲಿಸಿ, ವೇಗವಾಗಿ ಸಮೀಪಿಸಿ ನಂತರ ನಿಧಾನಗೊಂಡು ಕೊನೆಗೆ ಸೆರೆಹಿಡಿದು ನಿತ್ರಾಣಗೊಳಿಸಿ ಅದರ ರಸಾಹಾರ ಹೀರುತ್ತವೆ. ಪರಿಸರದಲ್ಲಿ ಜೇಡಗಳು ‘ಕೀಟ ನಿಯಂತ್ರಕ’ಗಳೆಂದೇ ಹೆಸರುವಾಸಿಯಾಗಿವೆ. ■